**ಸಿ ಸಿ . ನಂ. 1130/2018 ಪಿ.ಡಬ್ಲೂ-2 ಹೆಸರು - ಮಹೇಶ**

**ಸಾಕ್ಷಿಯನ್ನು ದಿನಾಂಕಃ 28.02.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಸಿ ಎಲ್ ಬಿ ವಕೀಲರಿಂದಃ-**

ಚಾಸಾ 1 ರವರು ಗಾಡಿಯಿಂದ ಬಿದ್ದು ಸುಮಾರು 5 ವರ್ಷಗಳ ಹಿಂದೆ ಅಪಘಾತ ಮಾಡಿಕೊಂಡಿದ್ದ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಜಮೀನು ಇದೆ. ನನ್ನ ಜಮೀನನ್ನು ಚಾಸಾ 1 ರವರು ವ್ಯವಸಾಯ ಮಾಡುತ್ತಿಲ್ಲ. ನಾನು ಚಾಸಾ 1 ರವರ ಜಮೀನನ್ನು ಸಾಗುವಳಿ ಮಾಡುತ್ತಿಲ್ಲ. ನಾನು ಚಾಸಾ 1 ರವರ ಮನೆಯಲ್ಲಿ ಕೆಲಸ ಇದ್ದಾಗಲೆಲ್ಲ ಸುಮಾರು 10 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಗಲಾಟೆ ಬೆಳಗ್ಗೆ 07.00 ಗಂಟೆಯಿಂದ 09.00 ಗಂಟೆಯವರೆಗೆ ನಡೆದಿರುತ್ತದೆ. ಚಾಸಾ 1 ರವರ ಅಕ್ಕಪಕ್ಕದಲ್ಲಿ 4-5 ಮನೆಗಳು ಇವೆ. ಚಾಸಾ 1 ರವರ ಮನೆ ಊರಿನ ಒಳಭಾಗದಲ್ಲಿದೆ. ನಮ್ಮ ಊರಿನಲ್ಲಿ ಸುಮಾರು 500 ಜನ ಸಂಖ್ಯೆ ಇದೆ. ಗಲಾಟೆ ಬೆಳಗ್ಗಿನ ಸಮಯದಲ್ಲಿ ನಡೆದ ಕಾರಣ ಸಾಮಾನ್ಯವಾಗಿ ಎಲ್ಲಾ ಜನರು ಮನೆಯಲ್ಲಿಯೇ ಇರುತ್ತಾರೆ ಎಂದರೆ ಸರಿ. ಗಲಾಟೆ ನಡೆದಾಗ ಸುಮಾರು 4-5 ಮಂದಿ ಇದ್ದರು. ಹಳ್ಳಿಗಳಲ್ಲಿ ಸಾಮಾನ್ಯವಾಗಿ ಗಲಾಟೆ ನಡೆದಾಗ ಅಲ್ಲಿದ್ದವರು ಬರುತ್ತಾರೆ ಎಂದರೆ ಸರಿ. ನಾನು ಚಾಸಾ 1 ರವರ ಮನೆಗೆ ಬೆಳಗ್ಗೆ 07.00 ಗಂಟೆಗೆ ಹೋಗಿ 9.30 ರವರೆಗೂ ಇದ್ದೆನು. ಚಾಸಾ 1 ರವರನ್ನು ಬೆಳಗ್ಗೆ 09.00 ಗಂಟೆಗೆ ಆಸ್ಪತ್ರೆಗೆ ಕರೆದುಕೊಂಡು ಹೋದರು. ಯಾವ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ಗೊತ್ತಿಲ್ಲ. ಚಾಸಾ 1 ರವರನ್ನು ಯಾವ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದು ನಂತರ ನಾನು ತಿಳಿದುಕೊಂಡಿಲ್ಲ. ಚಾಸಾ 1 ಮತ್ತು ಆರೋಪಿತರು ಸೋದರ ಸಂಬಂಧಿಗಳು ಎಂದರೆ ಸರಿ. ಚಾಸಾ 1 ಮತ್ತು ಆರೋಪಿತರ ನಡುವೆ ಸುಮಾರು ದಿನಗಳಿಂದ ಜಮೀನಿನ ಕುರಿತು ವಿವಾದ ನಡೆಯುತ್ತಿರುವ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ 1 ಮತ್ತು ಆರೋಪಿತರ ನಡುವೆ ನಡೆದ ಗಲಾಟೆಯನ್ನು ಹೊರತುಪಡಿಸಿ ಅವರುಗಳ ಮನೆಯ ವೈಯಕ್ತಿಕ ವಿಚಾರ ನನಗೆ ಗೊತ್ತಿಲ್ಲ. ನಾನು ದಿನಾಂಕ 28.03.2018 ರಂದು ಚಾಸಾ 1 ರವರ ಮನೆಯ ಕೊಟ್ಟಿಗೆಯ ಕೆಲಸಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿತನು ಜಾಗದ ವಿಚಾರದಲ್ಲಿ ಚಾಸಾ 1 ರವರಿಗೆ ಬೋಳಿ ಮಗನೆ, ಸೂಳೆ ಮಗನೆ ಎಂದು ಬೈದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ಚಾಸಾ 1 ರವರ ಎಡಗಾಲಿಗೆ

ದೊಣ್ಣೆಯಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಕಲ್ಲಿನಿಂದ ಚಾಸಾ 1 ರವರ ಹಣೆಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ಕೈಗಳಿಂದ ಚಾಸಾ 1 ರವರ ಭುಜಕ್ಕೆ ಮತ್ತು ಎದೆಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ 5 ರವರು ಗಲಾಟೆ ಬಿಡಿಸಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರನ್ನು ಚಾಸಾ 6 ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಚಾಸಾ 1 ರವರ ಕೈಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ಗಲಾಟೆ ನಡೆದ ಮರುದಿನ ಪೊಲೀಸರು ಬೆಳಗ್ಗೆ 11.30 ರಿಂದ 12.30 ರವರೆಗೆ ಸ್ಥಳಕ್ಕೆ ಬಂದಿದ್ದರು. ಪೊಲೀಸರು ಬಂದಾಗ ಸ್ಥಳದಲ್ಲಿ ನಾನು ಮತ್ತು ಚಾಸಾ 5 ರವರ ಇದ್ದೆವು. ಇಬ್ಬರು ಪೊಲೀಸರು ಬಂದಿದ್ದರು. ನನಗೆ ಓದಲು ಬರುವುದಿಲ್ಲ, ಮಹಜರನ್ನು ನಾನು ಓದಿಲ್ಲ. ಪೊಲೀಸರಿಗೆ ಕಲ್ಲು ಮತ್ತು ದೊಣ್ಣೆಯನ್ನು ನಾನೇ ನೀಡಿರುತ್ತೇನೆ. ಕಲ್ಲು ಮತ್ತು ದೊಣ್ಣೆ ಚಾಸಾ 1 ರವರ ಕೊಟ್ಟಿಗೆಯಲ್ಲಿ ಬಿದ್ದಿದ್ದವು. ಗಲಾಟೆ ಕೊಟ್ಟಿಗೆಯಲ್ಲಿ ನಡೆದಿತ್ತು. ಸದರಿ ಕೊಟ್ಟಿಗೆ ಯಾರಿಗೆ ಸೇರಿದ್ದು ಎಂಬ ಬಗ್ಗೆ ಗೊತ್ತಿಲ್ಲ. ಸಾಮಾನ್ಯವಾಗಿ ದೊಣ್ಣೆಯನ್ನು ಸೌದೆಗೆ ಉಪಯೋಗಿಸುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಕಲ್ಲುಗಳು ಬೀದಿಯಲ್ಲಿ ಬಿದ್ದಿರುತ್ತವೆ ಎಂದರೆ ಸರಿ. ಪೊಲೀಸರು ಸ್ಥಳಕ್ಕೆ ಬಂದಿಲ್ಲ, ಮಹಜರ್ ಕ್ರಮ ಜರುಗಿಸಿಲ್ಲ ಹಾಗೂ ಮುದ್ದೆ ಮಾಲು 1 ಮತ್ತು 2 ನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ 1 ರವರ ಮನೆಯಲ್ಲಿ ಕೆಲಸ ಮಾಡುವ ಕಾರಣ ಅವರಿಗೆ ಅನುಕೂಲವಾಗುವಂತೆ ಅವರ ಸೂಚನೆಯ ಮೇರೆಗೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗಲಾಟೆಯ ನಂತರ ಚಾಸಾ 1 ರವರಿಗೆ ಮೂರ್ಛೆ ಹೋಗಿತ್ತು. ಚಾಸಾ 1 ರವರಿಗೆ ಮೂರ್ಛೆಯಿಂದ ಹೊರ ಬರಲು ಏನು ಮಾಡಿದರು ಎಂದು ನನಗೆ ಗೊತ್ತಿಲ್ಲ. ಚಾಸಾ 1 ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ನಡೆಯದಿದ್ದಾಗ್ಯೂ ಚಾಸಾ 1 ರವರ ಚಿತಾವಣೆಯ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ಮತ್ತು ಆರೋಪಿತರ ಕುಟುಂಬದವರ ನಡುವೆ ಬಹಳ ಹಿಂದಿನಿಂದಲೂ ಕೂಡ ಜಮೀನಿನ ಕುರಿತಾಗಿ ವಿವಾದ ಇದ್ದು, ಅದನ್ನು ದುರುಪಯೋಗಪಡಿಸಿಕೊಂಡು ಚಾಸಾ

1 ರವರು ದೂರನ್ನು ನೀಡಿದ್ದು, ಸದರಿ ದೂರಿಗೆ ಪೂರಕವಾಗಿ ಚಾಸಾ 1 ರವರ ಸೂಚನೆಯ ಮೇರೆಗೆ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**